

## ವರವಾದ ತಂತ್ರಜ್ಞಾನದ ಬಳಕೆ

'ಕಂಪ್ಯೂಟರ್ ಚೆಸ್' ಹಾರ್ಡ್‌ವೇರ್ ಮತ್ತು ಚೆಸ್ ಆಡುವ ಸಾಮರ್ಥ್ಯವಿರುವ ಸಾಫ್ಟ್‌ವೇರ್ ಎರಡನ್ನೂ ಒಳಗೊಂಡಿದೆ. ಎದುರಾಳಿಯಾಗಿ ಯಾವ ವ್ಯಕ್ತಿ ಇಲ್ಲದಿದ್ದರೂ ಕಂಪ್ಯೂಟರ್ ಸ್ಪರ್ಧಿಗೆ ಪ್ರಬಲ ಪ್ರತಿರೋಧ ಒಡ್ಡುವ ಸಾಮರ್ಥ್ಯ ಹೊಂದಿರುತ್ತದೆ. ಹೊಸ ಸವಾಲುಗಳನ್ನು ಎದುರಿಸುವುದು, ವಿಶ್ಲೇಷಣೆಗಳನ್ನು ಮಾಡುವುದು, ತರಬೇತಿ ಮತ್ತು ಮನರಂಜನೆ ಒದಗಿಸುತ್ತದೆ.

ಕಂಪ್ಯೂಟರ್ ಚೆಸ್ ಅಪ್ಲಿಕೇಶನ್‌ಗಳು, ಹಾರ್ಡ್‌ವೇರ್ ಅಥವಾ ಸಾಫ್ಟ್‌ವೇರ್‌ನಲ್ಲಿ ಅಳವಡಿಸಲಾಗಿದ್ದರೂ, ತಮ್ಮ ಚಲನೆಗಳನ್ನು ಆಯ್ಕೆ ಮಾಡಲು ಮಾನವರಿಗಿಂತ ವಿಭಿನ್ನ ತಂತ್ರಗಳನ್ನು ಬಳಸುತ್ತವೆ. ತಂತ್ರಜ್ಞಾನದ ಈ ಕಾಲದಲ್ಲಿ ಕಂಪ್ಯೂಟರ್‌ನಲ್ಲಿ ಚೆಸ್ ಕಲಿಯುವ, ಬುದ್ಧಿಗೆ ಕಸರತ್ತು ಕೊಡುವ ಹೆಚ್ಚಿನ ಅವಕಾಶಗಳು ಮನುಷ್ಯನಿಗೆ ಇವೆ. ಚೆಸ್ ಕಲಿಕೆಯ ವರ್ಷಗಳಲ್ಲಿ ಕಂಪ್ಯೂಟರ್ ಮೂಲಕ ಚೆಸ್ ಕಲಿತು ಇದರಿಂದಲೇ ಜಗತ್ತಿನಲ್ಲಿ ಎತ್ತರದ ಸಾಧನೆ ಮಾಡಿದವರು ಕಾರ್ಲ್‌ಸನ್. 2013ರಲ್ಲಿ ವಿಶ್ವ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಾಗ 'ಚೆಸ್ ಕಂಪ್ಯೂಟರ್' ಮೂಲಕ ಆಟ ಸುಧಾರಿಸಿಕೊಂಡು ಚಾಂಪಿಯನ್ ಆದ ಮೊದಲ ಆಟಗಾರ ಎನ್ನುವ ಕೀರ್ತಿಗೂ ಅವರು ಪಾತ್ರರಾದರು.

ಕಾರ್ಲ್‌ಸನ್ 'ಫಿಡೆ ವಿಶ್ವ ಚೆಸ್ ರ‍್ಯಾಂಕಿಂಗ್'ನಲ್ಲಿ ಕಳೆದ ಹನ್ನೊಂದು ವರ್ಷಗಳಿಂದ ಅಗ್ರಸ್ಥಾನವನ್ನು ಅಬಾಧಿತವಾಗಿ ಅಲಂಕರಿಸಿಕೊಂಡು ಬಂದಿದ್ದಾರೆ. ಈಗ ಕಾರ್ಲ್‌ಸನ್ ಅವರನ್ನು ಸೋಲಿಸುವುದು ಜಗತ್ತಿನ ಪ್ರತಿಯೊಬ್ಬ ಆಟಗಾರನ ಕನಸು. ಅದಕ್ಕಾಗಿಯೇ 'ಹೌ ಟು ಬೀಟ್ ಮ್ಯಾಗ್ನಸ್ ಕಾರ್ಲ್‌ಸನ್', 'ದ ಮ್ಯಾಗ್ನಸ್ ಮೆಥೆಡ್' ಎನ್ನುವ ಪುಸ್ತಕಗಳು ಮಾರುಕಟ್ಟೆಯಲ್ಲಿ ಹೆಚ್ಚಾಗಿ ಸದ್ದು ಮಾಡುತ್ತಿವೆ.

'ಫಿಡೆ ವಿಶ್ವ ಚೆಸ್ ರ‍್ಯಾಂಕಿಂಗ್'ನಲ್ಲಿ ಹೆಚ್ಚು ವರ್ಷಗಳ ಕಾಲ ಅಗ್ರಸ್ಥಾನ ಕಾಯ್ದುಕೊಂಡಿದ್ದ ಹೆಗ್ಗಳಿಕೆ ರಷ್ಯಾದ ದಿಗ್ಗಜ ಆಟಗಾರ ಗ್ಯಾರಿ ಕ್ಯಾಸ್ಪರೊವ್ (21 ವರ್ಷ ಮೂರು ತಿಂಗಳು) ಹೆಸರಿನಲ್ಲಿದೆ. ನಂತರದ ಸ್ಥಾನ ಕಾರ್ಲ್‌ಸನ್ (11 ವರ್ಷ ಆರು ತಿಂಗಳು) ಹೆಸರಿನಲ್ಲಿ ಮುಂದುವರಿದಿದೆ.

ಚೆಸ್ ಆಡುವವರು ಮನದಲ್ಲಿಯೇ ಹೆಚ್ಚು ಲೆಕ್ಕಾಚಾರಗಳನ್ನು ಹಾಕುತ್ತಾರೆ. ಹೆಚ್ಚು ಬುದ್ಧಿವಂತರಿರುತ್ತಾರೆ ಎನ್ನುವುದು ಅವರ ಬಗ್ಗೆ ಇರುವ ಸಾಮಾನ್ಯವಾದ ಮಾತು. ಇದು ಕಾರ್ಲ್‌ಸನ್ ವಿಷಯದಲ್ಲಿಯೂ ನಿಜ. ಚಿಕ್ಕಂದಿನಲ್ಲೇ ನಾರ್ವೆಯ ಆಟಗಾರ ಅತ್ಯಂತ ಬುದ್ಧಿವಂತ ಹುಡುಗ ಎನಿಸಿಕೊಂಡಿದ್ದ. ತನ್ನ ಹದಿಮೂರನೇ ವಯಸ್ಸಿನಲ್ಲಿ ಗ್ರ್ಯಾಂಡ್ ಮಾಸ್ಟರ್ ಗೌರವಕ್ಕೆ ಭಾಜನವಾಗಿದ್ದು ಇದಕ್ಕೆ ಸಾಕ್ಷಿ.

ಹದಿಹರೆಯದಲ್ಲಿ ಆಕ್ರಮಣಕಾರಿ ಶೈಲಿಯ ಆಟಕ್ಕೆ ಹೆಸರಾಗಿದ್ದ ಕಾರ್ಲ್‌ಸನ್ ಎದುರಾಳಿ ಸ್ಪರ್ಧಿಗಳಿಗೆ ಕಷ್ಟವಾಗುವಂತೆ ಮಾಡಲು ಪಂದ್ಯಕ್ಕೂ ಮೊದಲು ಕಂಪ್ಯೂಟರ್ ಗೇಮ್ ಮೂಲಕ ವಿಶ್ಲೇಷಣೆ ಮಾಡುತ್ತಿದ್ದ.

ಕಾರ್ಲ್‌ಸನ್ ಮೂರು ಬಾರಿ ವಿಶ್ವ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್, ಐದು ಸಲ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್ ಆಗಿದ್ದಾರೆ. ಚೆಸ್ ಆಡಲು ಕಲಿತ ದಿನಗಳ ಆರಂಭದಲ್ಲಿ ಪಡೆದ ಯಶಸ್ಸು, ಆಟದ ಕೌಶಲಗಳನ್ನು ಕಲಿತುಕೊಂಡ ಮಾದರಿ ನಿರಂತರವಾಗಿ ಅವರನ್ನು 'ಫಾರ್ಮ್'ನಲ್ಲಿ ಇರಿಸಲು ಸಾಧ್ಯವಾಗಿದೆ.

13 ವರ್ಷದವರಾಗಿದ್ದಾಗ ಕೊರಸ್ ಟೂರ್ನಿಯ 'ಸಿ' ಗುಂಪಿನಲ್ಲಿ ಅಗ್ರಸ್ಥಾನ ಸಂಪಾದಿಸಿದರು. ಇದಾದ ಎರಡು ವರ್ಷಗಳ ನಂತರ ನಾರ್ವೆಜಿಯನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದರು. 17ನೇ ವರ್ಷದಲ್ಲಿ ಕೊರಸ್ ಟೂರ್ನಿಯಲ್ಲಿ ಅಗ್ರ ಗುಂಪಿನಿಂದ ಜಂಟಿ ಅಗ್ರಸ್ಥಾನ ಹಂಚಿಕೊಂಡಿದ್ದರು. 2014ರ ಮೇ ತಿಂಗಳಲ್ಲಿ 2,882 ರೇಟಿಂಗ್‌ಗಳನ್ನು ಪಡೆದಿದ್ದು ಅವರ ವೃತ್ತಿಬದುಕಿನ ಶ್ರೇಷ್ಠ ಸಾಧನೆಯಾಗಿದೆ. 2006ರಲ್ಲಿ ಕಾರ್ಲ್‌ಸನ್ ವಿಶ್ವದ ಶ್ರೇಷ್ಠ ಚೆಸ್ ಆಟಗಾರರ ಪಟ್ಟಿಯಲ್ಲಿ 100ರ ಒಳಗೆ ಸ್ಥಾನ ಗಳಿಸಿದ್ದರು. ಆಗ ಅವರಿಗೆ ಕೇವಲ 15 ವರ್ಷ ವಯಸ್ಸು.

ಕಾರ್ಲ್‌ಸನ್ ಚೆಸ್ ಚಾಂಪಿಯನ್ ಮಾತ್ರವಲ್ಲ. ಅಪಾರ ನೆನಪಿನ ಶಕ್ತಿ ಕೂಡ ಅವರ ಸಾಮರ್ಥ್ಯಗಳಲ್ಲೊಂದು. ತಮ್ಮ ಸಾವಿರ ಪಂದ್ಯಗಳಲ್ಲಿ ಕಾಯಿಗಳನ್ನು ಮುನ್ನಡೆಸಿದ ಮಾದರಿ, ಏಕಕಾಲದಲ್ಲಿ ಹಲವಾರು ಆಟಗಾರರನ್ನು ಸೋಲಿಸುವ ಶಕ್ತಿಯಿದೆ. ಕಡಿಮೆ ನಡೆಗಳಲ್ಲಿಯೇ ಎದುರಾಳಿ ಆಟಗಾರನನ್ನು ಮಣಿಸಬಲ್ಲರು.

ಮಾಡೆಲಿಂಗ್‌ನಲ್ಲಿಯೂ ಹಲವು ನಟಿಯರ ಜೊತೆ ಕೆಲಸ ಮಾಡಿದ್ದಾರೆ. ಜೊತೆಗೆ ಫುಟ್‌ಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಆಡುತ್ತಾರೆ. ಕಾರ್ಲ್‌ಸನ್ ಈಗ ಆಟಗಾರನಾಗಿಯಷ್ಟೇ ಉಳಿದಿಲ್ಲ. ಅವರು ಚೆಸ್ ದಂತಕಥೆಗಳ ಸಾಲಿಗೆ ಸೇರಿದ್ದಾರೆ.

ಪ್ರತಿಕ್ರಿಯಿಸಿ: feedback@sudha.

## ಭಾರತೀಯರ 'ಆನಂದ' ಕಸಿದ ಕಾರ್ಲ್‌ಸನ್

ಭಾರತದ ಅದ್ವಿತೀಯ ಚೆಸ್ ಆಟಗಾರ, ಐದು ಬಾರಿಯ ವಿಶ್ವ ಚಾಂಪಿಯನ್ ಹಾಗೂ ಭಾರತದ ಮೊದಲ ಗ್ರ್ಯಾಂಡ್ ಮಾಸ್ಟರ್ ಎನ್ನುವ ಹೆಗ್ಗಳಿಕೆ ಹೊಂದಿರುವ ವಿಶ್ವನಾಥನ್ ಆನಂದ್ ಎದುರು 2013ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಂದ್ಯ ಗೆಲ್ಲುವ ಮೂಲಕ ಕಾರ್ಲ್‌ಸನ್ ಜಗತ್ತಿನ ಹೊಸ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಒಂಬತ್ತು ವರ್ಷಗಳ ಹಿಂದೆ ಚೆನ್ನೈನಲ್ಲಿ ಚಾಂಪಿಯನ್ ಆನಂದ್ ಮತ್ತು ಕಾರ್ಲ್‌ಸನ್ ನಡುವಿನ ಪಂದ್ಯ ಜಗತ್ತಿನ ಗಮನ ಸೆಳೆದಿತ್ತು. ಅನೇಕ ಬಲಿಷ್ಠ ಆಟಗಾರರನ್ನು ಸೋಲಿಸಿದ್ದ ಆಗ 43 ವರ್ಷದವರಾಗಿದ್ದ ವಿಶ್ವನಾಥನ್ ಆನಂದ್ ಅವರು ಕಾರ್ಲ್‌ಸನ್ (ಆಗ 22 ವರ್ಷ) ಎದುರು ಸುಲಭವಾಗಿ ಗೆಲ್ಲಬಹುದು ಎನ್ನುವ ಚರ್ಚೆ, ವಿಶ್ಲೇಷಣೆಗಳು ನಡೆದಿದ್ದವು. ಆನಂದ್‌ಗೆ ಒಂದೂ ಪಂದ್ಯದಲ್ಲಿ ಗೆಲ್ಲಲು ಅವಕಾಶ ಕೊಡದೆ ಭಾರತೀಯರ 'ಆನಂದ' ಕಸಿದು ಕಾರ್ಲ್‌ಸನ್ ಚಾಂಪಿಯನ್ ಆದರು. ಆ ಪಂದ್ಯದಲ್ಲಿ ನಿರೀಕ್ಷಿತ ಪೈಪೋಟಿಯೂ ಕಾಣಲಿಲ್ಲ. 12 ಸುತ್ತುಗಳ ಹಣಾಹಣಿಯಲ್ಲಿ ಎರಡು ಸುತ್ತುಗಳ ಆಟ ಬಾಕಿ ಇರುವಂತೆಯೇ ನಾರ್ವೆ ಆಟಗಾರ ಗೆಲುವು ಪಡೆದರು. ಇದು ಈಗಲೂ ಚೆಸ್ ಇತಿಹಾಸದಲ್ಲಿ ಮಹತ್ವದ ಪಂದ್ಯವಾಗಿ ದಾಖಲಾಗಿದೆ.

